**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**ಸಿಸಿ ನಂಬರ ಃ 1087/2022**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಶೇಖರಪ್ಪ | ಸಿ.ಡಬ್ಲ್ಯು 4 |
| ತಂದೆಯ ಹೆಸರು | ಃ ಲೇ. ವೀರಪ್ಪ | ಪಿ.ಡಬ್ಲ್ಯು 1 |
| ವಯಸ್ಸು | ಃ 58 ವರ್ಷ | |
| ಉದ್ಯೋಗ | ಃ ಎ ಎಸ್ ಐ | |
| ವಾಸ ಸ್ಥಳ | ಃ ತರೀಕೆರೆ ಪೊಲೀಸ್ ಠಾಣೆ. | |

**ದಿನಾಂಕಃ 11-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನಾನು 2017 ರಿಂದ ಇಲ್ಲಿಯವರೆಗೆ ತರೀಕೆರೆ ಠಾಣೆಯಲ್ಲಿ ಎಎಸ್ಐ ಎಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 26-06-2021 ರಂದು ರಾತ್ರಿ 8.15 ಗಂಟೆಗೆ ನಮ್ಮ ಠಾಣೆಯ ಪಿ ಐ ಚಾಸಾ-1 ರವರು ನನಗೆ ಮತ್ತು ಚಾಸಾ-5 ರಿಂದ 10 ರವರಿಗೆ ತಮಗೆ ಬಂದ ಮಾಹಿತಿ ಬಗ್ಗೆ ವಿವರಿಸಿ ದಾಳಿಗೆ ಸಹಕರಿಸಲು ಕೋರಿದರು. ಆ ಪ್ರಕಾರ ನಾವು ಎಲ್ಲರೂ ಇಲಾಖಾ ವಾಹನದಲ್ಲಿ 8.15 ಗಂಟೆಗೆ ಠಾಣಾಯಿಂದ ಹೊರಟು ಜೋಡಿ ಕೊಡಿಹಳ್ಳಿಯ ಕಡೆಗೆ ಹೋಗುತ್ತಿದ್ದೆವು. ಅಲ್ಲಿಗೆ ಹೋಗಿ ಚಾಸಾ-2 ಮತ್ತು 3 ರವರಿಗೆ ಪಂಚರಾಗಿ ಸಹಕರಿಸಲು ಒಪ್ಪಿಸಿ ಅವರನ್ನು ಕೂಡಾ ಕರೆದುಕೊಂಡು ಮಾಹಿತಿ ಬಂದ ಸ್ದಳಕ್ಕೆ ಸ್ವಲ್ಪ ದೂರದಲ್ಲಿ ನಿಂತಿವು. ಸ್ವಲ್ಪ ಸಮಯದ ನಂತರ ಮನೆಯ ಒಳಗ ಹೋಗಿ ಪರೀಕ್ಷಿಸಿದಾಗ ಒಬ್ಬ ವ್ಯಕ್ತಿ ಕೈಯಲ್ಲಿ ಪ್ಲಾಸ್ಟಿಕ ಕವರ ಹಿಡಿದು ನಿಂತಿದ್ದನು ಮತ್ತು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಮಾಡಿದನು ನಾವು ಆತನನ್ನು ಹಿಡಿದುಕೊಂಡು ಚಾಸಾ-1 ರವರ ಮುಂದೆ ಹಾಜರುಪಡಿಸಿದೆವು. ಕೇಳಲಾಗಿ ಆತನು ತನ್ನ ಹೆಸರನ್ನು ರಾಜು ಎಂದು ತಿಳಿಸಿದನು. ಆತನ ಬಳಿ ಇದ್ದ ಚೀಲದಲ್ಲಿ 90 ಎಂಎಲ್‌ನ 40 ಓಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು. ಅವುಗಳ ಬಗ್ಗೆ ಯಾವುದೇ ದಾಖಲೆ ಆರೋಪಿಯು ಹಾಜರು ಮಾಡಲಿಲ್ಲ. ಕಾರಣ ಚಾಸಾ-1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ರಾತ್ರಿ 8.45 ರಿಂದ 9.45 ರ ಮಧ್ಯೆದಲ್ಲಿ ಪಂಚನಾಮೆಯನ್ನು ಜರುಗಿಸಿ, ಮದ್ಯವನ್ನು ವಶಕ್ಕೆ ಪಡೆದುಕೊಂಡು ತಜ್ಞರ ಪರೀಕ್ಷೆಗಾಗಿ ಒಂದು ಕವರಿನಲ್ಲಿ ಸೀಲು ಮಾಡಿ ಇಟ್ಟರು. ನಂತರ ಮುದ್ದೆ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಿಂದಿರುಗಿ ಚಾಸಾ-1 ರವರು ಸರ್ಕಾರದ ತರ್ಫೆ ದೂರನ್ನು ಕೊಟ್ಟಿರುತ್ತಾರೆ. ಅಮಾನತ್ತು ಪಂಚನಾಮೆಗೆ ನಾನು ಕೂಡಾ ಸಹಿ ಹಾಕಿದ್ದೇನೆ. ಅದನ್ನು ನಿಪಿ.1, ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಮದ್ಯ ಪೌಚುಗಳನ್ನು ಮು.ಮಾ.1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾವು ದಾಳಿ ಮಾಡಿದ್ದೇವೆ ಎನ್ನಲಾಗುವ ಮನೆಯ ಅಕ್ಕಪಕ್ಕ ಕೂಡಾ ವಾಸದ ಮನೆಗಳು ಇವೆ ಎಂದರೆ ಸರಿ. ನಾವು ಜೊತೆಯಲ್ಲಿ ಪಂಚರನ್ನು ಕರೆದುಕೊಂಡು ಹೋಗಿದ್ದ ಕಾರಣ ಸ್ಥಾನೀಕರನ್ನು ಪಂಚನಾಮೆಗೆ ಕರೆಯಲಿಲ್ಲ. ನಾನು ಮೇಲೆ ಹೇಳಿದಂತೆ ಚಾಸಾ-1 ರವರಿಗೆ ಯಾವುದೇ ಮಾಹಿತಿ ಬಂದಿಲ್ಲ, ನಾನು ಅವರೊಂದಿಗೆ ದಾಳಿಗೆ ಹೋಗಿಲ್ಲ, ಚಾಸಾ-1 ರವರು ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆ ಮಾಲಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಮೇಲಾಧಿಕಾರಿ ಎಂದರೆ ಸರಿ. ಅವರಿಗೆ ಸಹಾಯ ಮಾಡಲು ಅವರು ಹೇಳಿದ ದಾಖಲೆಗಳಿಗೆ ಸಹಿ ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಂತಹ ಖಾಲಿ ಮದ್ಯದ ಪೌಚುಗಳು ಸಾಮಾನ್ಯವಾಗಿ ಬಾರುಗಳಲ್ಲಿ ಸಿಗುತ್ತವೆ ಎಂದರೆ ಸರಿ. ಆದರೆ ಮನೆಯಲ್ಲಿ ಸಿಗುವುದಿಲ್ಲ. ದಾಳಿಯ ಸಮಯದಲ್ಲಿ ಅಥವಾ ಪಂಚನಾಮೆಯ ಕಾಲಕ್ಕೆ ಫೋಟೊ ತೆಗೆಸಿಲ್ಲ, ನಮ್ಮ ಎಲ್ಲರ ಮೊಬೈಲ್ ಇದ್ದವು ಎಂದರೆ ಸರಿ . ಫೋಟೊ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ಸರಿ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ**
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**